2	ಪ್ರಯೋಗಶಾಲಾ ತಂತ್ರಜ್ಞರು	48
3	ಕ್ಷ–ಕಿರಣ ತಂತ್ರಜ್ಞರು	05
4	ವೈದ್ಯಕೀಯ ದಾಖಿಲಾತಿ ತಂತ್ರಜ್ಞರು	12
5	ಸಹಾಯಕ ಗ್ರಂಥಪಾಲಕರು	02
6	ಚಿತ್ರಕಾರ	01
7	ಮಾಡೆಲ್ಲರ್	01
8	ಅಂಕೆ ಸಂಖ್ಯೆ ತಂತ್ರಜ್ಞರು	01
9	ಉಪ ಗ್ರಂಥಪಾಲಕರು	01
10	ವೈದ್ಯಕೀಯ ಸಮಾಜ ಸೇವಕರು	02
11	ಇತರೆ	105

ವಕ್ಫ್ ಮಂಡಳಿಯ ಅನುದಾನದಲ್ಲಿ ನಡೆಯುತ್ತಿರುವ ಕಾಮಗಾರಿ

380 (774) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಹಜ್ ವಕ್ಫ್ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣದಲ್ಲಿ ವಕ್ಫ್ ಅನುದಾನದಲ್ಲಿ ಎಷ್ಟು ಶಾದಿಮಹಲ್ ಗಳನ್ನು ಮತ್ತು ಇತರೆ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ; (ಗ್ರಾಮವಾರು ವಿವರಗಳನ್ನು ಒದಗಿಸುವುದು);

ಆ) ಕಳೆದ ಮೂರು ವರ್ಷಗಳಲ್ಲಿ ಇದಕ್ಕಾಗಿ ವಕ್ಫ್ ಮಂಡಳಿಯಿಂದ ಎಷ್ಟು ಅನುದಾನ ಬಂದಿದೆ;

ಇ) ಇದೇ ಅವಧಿಯಲ್ಲಿ ಎಷ್ಟು ಪ್ರಸ್ತಾವನೆಗಳನ್ನು ಮಂಡಳಿಗೆ ಸಲ್ಲಿಸಲಾಗಿತ್ತು, ಎಷ್ಟಕ್ಕೆ ಅನುಮೋದನೆ ದೊರೆತಿದೆ ಇನ್ನೂ ಎಷ್ಟು ಪ್ರಸ್ತಾವನೆಗಳು ಬಾಕಿ ಉಳಿದಿವೆ?

ಪ್ರೊ. ಡಾ. ಮುಮ್ತಾಜ್ ಅಲಿ ಖಾನ್ (ಹಜ್ ವಕ್ಫ್ ಮತ್ತು ಅಲ್ಪಸಂಖ್ಯಾತರ ಸಚಿವರು) :

ಅ) ವಕ್ಫ್ ಅನುದಾನದಲ್ಲಿ ಶಾದಿಮಹಲ್‌ಗಳಿಗೆ ಹಣ ಬಿಡುಗಡೆ ಮಾಡಲು ಅವಕಾಶವಿರುವುದಿಲ್ಲ. ಆದರೆ, ಅಲ್ಪಸಂಖ್ಯಾತರ ನಿರ್ದೇಶನಾಲಾಯದಿಂದ ದಾರುಲ್ ಸಲಾಂ ವೆಲ್‌ಫೇರ್ ಟ್ರಸ್ಟ್, ಬಸವಕಲ್ಯಾಣ ಸಂಸ್ಥೆಗೆ

ಶಾದಿಮಹಲ್ ನಿರ್ಮಾಣಕ್ಕಾಗಿ ರೂ.3.00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ.

ವಕ್ಫ್ ಸಂಸ್ಥೆಗಳ ದುರಸ್ಥಿ, ನಿರ್ಮಾಣ ಹಾಗೂ ಜೀರ್ಣೋದ್ಧಾರಕ್ಕಾಗಿ ಸರ್ಕಾರದಿಂದ ಅನುದಾನವನ್ನು ಮಂಜೂರು ಮಾಡಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಮುಖಾಂತರ ಬಿಡುಗಡೆ ಮಾಡಲಾಗುತ್ತಿದೆ. (ಗ್ರಾಮಾಂತರವಾರು ವಿವರ ಅನುಬಂಧ–1ರಲ್ಲಿ ಲಗತ್ತಿಸಿದೆ.)

ಆ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ವಕ್ಫ್ ಮಂಡಳಿಗೆ ಬಸವಕಲ್ಯಾಣಕ್ಕೆ ನೀಡಿರುವ ಅನುದಾನ ಕೆಳಕಂಡಂತಿದೆ:

ವರ್ಷ	ಮೊತ್ತ	ಉದ್ದೇಶ
2006–07	13.75 ಲಕ್ಷ	ಮಸೀದಿ, ದರ್ಗಾ, ಖಬರಸ್ಥಾನಗಳ ದುರಸ್ಥಿ ನಿರ್ಮಾಣ ಹಾಗೂ ಜೀರ್ಣೋದ್ಧಾರಕ್ಕಾಗಿ
2007–08	1.50 ಲಕ್ಷ	ಮೇಲಿನಂತೆ
2008–09	ಇಲ್ಲ	

ಇ)

ವರ್ಷ	ಸ್ವೀಕರಿಸಲಾದ ಪ್ರಸ್ತಾವನೆಗಳ ಸಂಖ್ಯೆ	ಮಂಜೂರಾದ ಪ್ರಸ್ತಾವನೆಗಳ ಸಂಖ್ಯೆ	ಬಾಕಿ
2006–07	10	10	ಇಲ್ಲ
2007–08	03	03	ಇಲ್ಲ
2008–09	09	01	08
2009–10	22	02	02

LIST SHOWING THE GRANTIN AID AMOUNT FOR THE FOLLOWING YEARS 2006-07

Sl. No.	NAMe OF THE WAKF	AMOUNT SANCTIONED In Lakhs
1	Eidgah Maidan, Basavakalyan, Bidar	5.00
2	Dargah Peer Pasha Godigowda Grama, Basavakalyan Taluk, Bidar	0.75
3	Muslim Khabrasthan, Rajola Grama, Basavakalyan Taluk Bidar	1.00
4	Jamia Masjid Bat, Balkunda Grama Basavakalyan Taluk	1.00
5	Sarwar Shah Dargah Committee, Yerandi Grama, B.K.Taluk Bidar District	1.00
6	Igah Maidan, Basavakalyan nagar.	0.50
7	Hussaini Dargah Committee Parthapura, Basavakalyan Tq.	1.00
8	Basavakalyan Idgah Maidan	2.00
9	Mohiyuddin Sha Wali Dargah, Ladavanthi Basavakalyan	1.00
	TOTAL	**2.25**
	2007-2008	
1	Desi Dargah, Thorhalla Village, Basavakalyan Madrasa	0.50
2	Jamia Masjid, Basavakalyan Taluk, Bidar	0.50
3	Dargah Mahaboob Subhani Rajola Village, Basavakalyan Tq.	0.50
	TOTAL	**1.50**
	2008-2009	
1	Basavakalyan Taluk, Kohinoor Pahad	0.50
		0.50

	2009-2010	
1	Muslim Khabrasthan & Dargah Hazrath Allaauddin Baba Sunni Basavakalyan Tq.	1.00
2	Rajola Village, Muslim Khabrasthan Basavakalyan Tq.	1.00
	TOTAL	**2.00**

ಹಾಲಕ್ಕಿ ಒಕ್ಕಲಿಗರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದು

381 (613) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟಾ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಹಾಲಕ್ಕಿ ಒಕ್ಕಲಿಗರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಹಿಂದಿನ ಸಚಿವ ಸಂಪುಟದ ನಿರ್ಣಯವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ; ಹಾಗಿದ್ದಲ್ಲಿ ಯಾವಾಗ ಸಲ್ಲಿಸಲಾಯಿತು;

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಹಾಲಕ್ಕಿ ಒಕ್ಕಲಿಗರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ವಿಷಯದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗಿರುವ ತೊಂದರೆಗಳೇನು;

ಇ) ಈ ವಿಚಾರದಲ್ಲಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ನಡೆಸಿದೆಯೇ;

ಈ) ಹಾಗಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು; (ವಿವರಗಳನ್ನು ನೀಡುವುದು)?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಹಾಲಕ್ಕಿ ಒಕ್ಕಲು ಜಾತಿಯನ್ನು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸೇರಿಸುವ ಸಲುವಾಗಿ ಪತ್ರ ಸಂಖ್ಯೆ:ಸಕಇ 27 ಎಸ್‌ಎಡಿ 2007, ದಿನಾಂಕ: 21-10-2009ರಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಆ) ಇ) ಮತ್ತು ಈ) :

ಯಾವುದೇ ಜಾತಿಯನ್ನು ಹೊಸದಾಗಿ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕೇಂದ್ರ ಸರ್ಕಾರ ಮಾತ್ರ ಅಧಿಕಾರ ಹೊಂದಿರುತ್ತದೆ. ಆದಕಾರಣ ಕೇಂದ್ರ ಸರ್ಕಾರ ತೆಗೆದುಕೊಳ್ಳಲಿರುವ ತೀರ್ಮಾನವನ್ನು ಕಾಯಲಾಗುತ್ತಿದೆ.